

# ಈ ಪರಿಯಿಂದಲಿ ಕರೆಯುಬಂದವರು ಯಾರು?

ಅನ್ಯಗ್ರಹ ಜೀವಿಗಳ ಅಸ್ತಿತ್ವದ ಬಗೆಹರಿಯದ ಒಗಟಿನ ಚರ್ಚೆ ಮತ್ತೆ ಚಾಲ್ತಿಗೆ ಬಂದಿದೆ. ಸೂರ್ಯನ ಹೊರತಾಗಿ ಭೂಮಿಗೆ ಅತಿ ಸಮೀಪದಲ್ಲಿರುವ ಮತ್ತೊಂದು ನಕ್ಷತ್ರದ ದಿಕ್ಕಿನಿಂದ ರೇಡಿಯೊ ಅಲೆಗಳ ಗುಚ್ಛವೊಂದು ನಮ್ಮತ್ತ ಚಿಮ್ಮಿ ಬಂದಿದೆಯೆಂಬ ಸುದ್ದಿ 'ಏಲಿಯನ್ಸ್'ಗಳ ಕುರಿತ ಚರ್ಚೆಗೆ ಹೊಸ ಕಾವು ನೀಡಿದೆ.

■ ಸುಧೀಂದ್ರ ಹಾಲ್ದೊಡ್ಡೇರಿ

ಸೂರ್ಯನ ಹೊರತಾಗಿ ಭೂಮಿಗೆ ಅತಿ ಸಮೀಪದಲ್ಲಿರುವ ಮತ್ತೊಂದು ನಕ್ಷತ್ರದ ದಿಕ್ಕಿನಿಂದ ರೇಡಿಯೊ ಅಲೆಗಳ ಗುಚ್ಛವೊಂದು ನಮ್ಮತ್ತ ಚಿಮ್ಮಿ ಬಂದಿದೆಯೆಂಬ ಸುದ್ದಿಯೊಂದು ಕೆಲವು ದಿನಗಳ ಹಿಂದೆಯಷ್ಟೇ ಪ್ರಕಟವಾಗಿದೆ. ಈ ರೋಚಕ ವಿಷಯವನ್ನು ರೇಡಿಯೊ ಖಗೋಳವಿಜ್ಞಾನಿಗಳೂ ಖಚಿತಪಡಿಸಿದ್ದಾರೆ. ಆದರೆ, ಇಂಥ ರೇಡಿಯೊ ಅಲೆಗಳನ್ನು ಯಾರು ಬಿತ್ತರಿಸಿದ್ದಾರೆಂಬುದು ಇನ್ನೂ ಪತ್ತೆಯಾಗಿಲ್ಲವೆಂದೂ ಅವರು ಹೇಳಿದ್ದಾರೆ. ಅಷ್ಟರೊಳಗೆ 'ಅನ್ಯಗ್ರಹ ಜೀವಿ'ಗಳ ಇರುವಿಕೆಯನ್ನು ನಂಬುವ ಪಾಶ್ಚಾತ್ಯ ದೇಶಗಳ ಕೆಲ ಜನರು ಸ್ವತಃ ಈ 'ಏಲಿಯನ್ಸ್'ಗಳು ತಮಗೇ ನೇರವಾಗಿ ಟೆಲಿಫೋನ್ ಕರೆ ಮಾಡಿರುವಂತೆ ಸಂಭ್ರಮಿಸುತ್ತಿದ್ದಾರೆ.

'ಅನ್ಯಗ್ರಹಜೀವಿ'ಗಳ ಕುರಿತಂತೆ ಪ್ರಕಟವಾಗಿರುವ ವಿಜ್ಞಾನ ಕಲ್ಪನಾಕತೆಗಳಲ್ಲಿ ಅತ್ಯಂತ ಪುರಾತನವಾದದ್ದು ಕ್ರಿ.ಶ. 1898ರಲ್ಲಿ ಬಿಡುಗಡೆಯಾದ ಹೆಚ್.ಜಿ.ವೆಲ್ಸ್ ಅವರ 'ದಿ ವಾರ್ ಆಫ್ ದ ವರ್ಲ್ಡ್' ಪುಸ್ತಕ. ಮನುಷ್ಯರಿಗಿಂತಲೂ ಬುದ್ಧಿವಂತರಾಗಿದ್ದ